# ರಾಜ್ಯದಲ್ಲಿ ಸೋಂಕು ಭಾರೀ ಇಳಿಮುಖ

## ದಿನವೂ 10 ಸಾವಿರದಷ್ಟಿದ್ದ ಹೊಸ ಕೇಸ್ ನಿನ್ನೆ 3130
## ಮೊನ್ನೆ ಕರ್ನಾಟಕದಲ್ಲೇ ಹೆಚ್ಚು ಮಂದಿ ಗುಣಮುಖ
## ಭಾನುವಾರ 10,106, ನಿನ್ನೆ 8715 ಜನ ಡಿಸ್ಚಾರ್ಜ್

• **ಕನ್ನಡ ಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಕೊರೋನಾ ಸೋಂಕಿನ ಹೊಸ ಪ್ರಕರಣಗಳ ಪತ್ತೆ ಪ್ರಮಾಣ ಭಾರಿ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ. ಸೋಂಕಿನ ಪ್ರಕರಣಗಳ ಕುಸಿತದ ಪ್ರಮಾಣ ಸತತ 12ನೇ ದಿನವಾದ ಸೋಮವಾರವೂ ಮುಂದುವರೆದಿದೆ. ಭಾನುವಾರ ಇಡೀ ದೇಶದಲ್ಲೇ ಅತಿ ಹೆಚ್ಚು ಮಂದಿ (10,106) ರಾಜ್ಯದಲ್ಲಿ ಕೊರೋನಾದಿಂದ ಗುಣಮುಖರಾಗಿದ್ದಾರೆ. ಇನ್ನು ಸೋಮವಾರ 8715 ಮಂದಿ ಡಿಸ್‌ಚಾರ್ಜ್ ಆಗಿದ್ದಾರೆ.

2 ವಾರಗಳ ಹಿಂದೆ ಸತತವಾಗಿ ನಿತ್ಯ 10 ಸಾವಿರಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೊಸ ಸೋಂಕಿನ ಪ್ರಕರಣಗಳು ವರದಿಯಾಗುತ್ತಿದ್ದರೆ, ಕಳೆದ ಕೆಲ ದಿನಗಳಿಂದ ಗುಣಮುಖರ ಸಂಖ್ಯೆ 10 ಸಾವಿರ ಗಡಿ ದಾಟುತ್ತಿದೆ. ↘ 6



ರಾಜ್ಯದಲ್ಲಿ ಸತತ 12ನೇ ದಿನ ಗುಣಮುಖ ಹೊಂದಿದವರ ಸಂಖ್ಯೆ ಹೊಸ ಸೋಂಕು ಪ್ರಕರಣಕ್ಕಿಂತ ಹೆಚ್ಚಿದೆ. ಮಾಸ್ಕ್ ಧರಿಸುವುದು, ಕೈತೊಳೆಯುವುದು ಮತ್ತು ಭೌತಿಕ ಅಂತರ ಕಾಯ್ದುಕೊಳ್ಳುವ ಮೂಲಕ ಕೋವಿಡ್ ವಿರುದ್ಧದ ನಮ್ಮ ಹೋರಾಟವನ್ನು ಮುಂದುವರಿಸೋಣ.

• **ಡಾ| ಕೆ. ಸುಧಾಕರ್** ಆರೋಗ್ಯ ಸಚಿವ

**ನಿನ್ನೆ ದೇಶದಲ್ಲಿ 35992 ಕೇಸ್** ↘ 9

# ದೇಶದಲ್ಲಿ ಕೇಸು ಶೇ.16, ಸಾವು ಶೇ.19 ಇಳಿಕೆ

## ಮಾ.22ರ ನಂತರ ಮೊದಲ ಬಾರಿ ಸಾವಿನ ದರ ಶೇ.1.5ಕ್ಕೆ ಇಳಿಕೆ

**ನವದೆಹಲಿ:** ದೇಶದಲ್ಲಿ ಕೊರೋನಾದ ಅಬ್ಬರ ಸತತ ಆರು ವಾರಗಳಿಂದ ಗಣನೀಯವಾಗಿ ಕಡಿಮೆಯಾಗುತ್ತಿದ್ದು ಕಳೆದ ವಾರ ಹೊಸ ಸೋಂಕಿತರ ಸಂಖ್ಯೆ ಹಾಗೂ ಸಾವಿನ ಸಂಖ್ಯೆಯಲ್ಲಿ ಸಾಕಷ್ಟು ಇಳಿಕೆಯಾಗಿದೆ. ಅ.19–25ರ ನಡುವಿನ ಅವಧಿಯಲ್ಲಿ ಅದರ ಹಿಂದಿನ ವಾರಕ್ಕಿಂತ ಕೊರೋನಾ ಸೋಂಕಿತರ ಸಂಖ್ಯೆ ಶೇ.16ರಷ್ಟು ಕಡಿಮೆಯಾಗಿದ್ದು ಕೊರೋನಾದಿಂದ ಸಂಭವಿಸಿದ ಸಾವಿನ ಸಂಖ್ಯೆ ಶೇ.19ರಷ್ಟು ಕಡಿಮೆಯಾಗಿದೆ. ಇದೇ ವೇಳೆ, ದೇಶದಲ್ಲಿ ಕೊರೋನಾದಿಂದ ಸಂಭವಿಸುವ ಸಾವಿನ ದರ ಮಾ.22ರ ನಂತರ ಮೊದಲ ಬಾರಿ ಶೇ.1.5ಕ್ಕೆ ಇಳಿಕೆಯಾಗಿದೆ. ↘ 9

# ನಿನ್ನೆ 35992 ಕೇಸ್: 3 ತಿಂಗಳಲ್ಲೇ ಕನಿಷ್ಠ!

**ನವದೆಹಲಿ:** ಕೊರೋನಾ ವೈರಸ್ ಪ್ರಕರಣಗಳು ಮೂರು ತಿಂಗಳ ಕನಿಷ್ಠಕ್ಕೆ ಕುಸಿತ ಕಂಡಿವೆ. ಸೋಮವಾರ ದೇಶದಲ್ಲಿ 35,992 ಕೊರೋನಾ ವೈರಸ್ ಪ್ರಕರಣಗಳು ದಾಖಲಾಗಿದ್ದು, ಸೋಂಕಿತರ ಸಂಖ್ಯೆ 79.44 ಲಕ್ಷಕ್ಕೆ ಏರಿಕೆ ಆಗಿದೆ. ಇನ್ನು ಕೊರೋನಾಕ್ಕೆ ಒಂದೇ ದಿನ 47[illegible] ಮಂದಿ ಸಾವಿಗೀಡಾಗಿದ್ದಾರೆ. ಇದು ಕೂಡ ಮೂರು ತಿಂಗಳ ಕನಿಷ್ಠ ಎನಿಸಿಕೊಂಡಿದೆ. ದೇಶದಲ್ಲಿ ಜು.16 ರಂದು 35,400 ಕೇಸ್ ದಾಖಲಾಗಿದ್ದವು. ಅದೇ ರೀತಿ ಜು.7ರಂದು 470 ಸಾವು ಸಂಭವಿಸಿತ್ತು.